TCCN

ನಗರ ಮತ್ತು ಗ್ರಾಮಾಂತರ ಯೋ
ಸಹಾಯಕ ನಿರ್ದೇಶಕರ ಕ
ನಂ. 217/88, ಮೊದಲನೇ ಮ
ಫಾರ್ಮ ಸಿ ಕಾಲೇಜು ಹಿಂಬ
ಬಿ.ಬಿ. ಟ್ಯಾಂಕ್ ರಸ್ತೆ, ಚಿಕ್ಕಬಳ್ಳಾ

ಕರ್ನಾಟಕ ಸರ್ಕಾರ

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

ಸಂ:ನಗ್ರಾಯೋಇನಿ/ಚಿಬ/ವಿನ್ಯಾಸ/04/2016-17//71 ದಿನಾಂಕ: 30 APR 2016

## ತಾಂತ್ರಿಕ ಅನುಮೋದನೆ

ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಗಂಗರೇಕಾಲುವೆ ಗ್ರಾಮದ ಸ.ನಂ. 152/3 ರಲ್ಲಿ 02ಎಕರೆ 08ಗುಂಟೆ ಮತ್ತು 152/4 ರಲ್ಲಿ 02ಎಕರೆ 22ಗುಂಟೆ ಒಟ್ಟು 04ಎಕರೆ 30ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:- 1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದಿಬ್ಬೂರು ಗ್ರಾಮ ಪಂಚಾಯಿತಿ ಕಾರ್ಯಾಲಯ ರವರ ಪತ್ರ ಸಂಖ್ಯೆ: ದಿ.ಗ್ರಾಪಂ./ನಕ್ಷೆ ಅನುಮೋದನೆ/ಸಿ.ಆರ್/01/2016-17 ದಿನಾಂಕ: 05.03.2016.

2. ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎಲ್ಎನ್.ಎಸ್ಆರ್.(ಚಿ)ಸಕಾಲ.325/2015-16, ದಿನಾಂಕ: 16.12.2015 ಮತ್ತು ಎಎಲ್ಎನ್. ಎಸ್ಆರ್.(ಚಿ)ಸಕಾಲ.326/2015-16, ದಿನಾಂಕ: 03.03.2016.

3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಪಿಡಿ ಸಂಖ್ಯೆ:ಗ್ರಾಅಪ 86 ಅಗ್ರಾಪಂ 2014 ದಿನಾಂಕ:11.11.2014.

*-*-*-*-*

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಗಂಗರೇಕಾಲುವೆ ಗ್ರಾಮದ ಸ.ನಂ. 152/3 ರಲ್ಲಿ 02ಎಕರೆ 08ಗುಂಟೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಲಾಗಿದೆ ಸದರಿ ಜಮೀನಿಗೆ ಉಲ್ಲೇಖ(2) ರಂತೆ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಇವರಿಂದ ವಸತಿ ಉದ್ದೇಶಕ್ಕಾಗಿ ಭೂ-ಪರಿವರ್ತಿಸಿ ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಲಾಗಿರುತ್ತದೆ. ವಿನ್ಯಾಸ ಅನುಮೋದನೆ ಸಂಬಂಧ ಅರ್ಜಿದಾರರು ವಿನ್ಯಾಸ ನಕ್ಷೆ ತಯಾರಿಕಾ ಶುಲ್ಕ ರೂ.1500/-ಗಳನ್ನು ಎಸ್.ಬಿ.ಎಂ ಚಿಕ್ಕಬಳ್ಳಾಪುರ ಬ್ಯಾಂಕ್‌ನ ಚಲನ್ ಸಂಖ್ಯೆ:31 ರಲ್ಲಿ ದಿನಾಂಕ: 18.04.2016 ರಂದು ಪಾವತಿಸಿರುತ್ತಾರೆ. ಆದ್ದರಿಂದ, ಪ್ರಸ್ತಾವನೆಯನ್ನು ಪರಿಶೀಲಿಸಿ ನಿಯಮಾನುಸಾರ ವಸತಿ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿದ್ದು ಈ ನಕ್ಷೆಯಂತೆ ವಸತಿಗಾಗಿ 10522.93 ಚ.ಮೀ. (ಶೇ.54.74), ಉದ್ಯಾನವನಕ್ಕಾಗಿ 1025.43 ಚ.ಮೀ.(ಶೇ.05.33), ನಾಗರೀಕ ಸೌಲಭ್ಯಕ್ಕಾಗಿ 1069.96 ಚ.ಮೀ.(ಶೇ.05.57) ಮತ್ತು ರಸ್ತೆಗಾಗಿ 6603.98 ಚ.ಮೀ.(ಶೇ.34.36) ಕಾಯ್ದಿರಿಸಿದೆ. ಈ ವಿನ್ಯಾಸದಲ್ಲಿ 9.14ಮೀx15.24ಮೀ ಅಳತೆಯ 02 ನಿವೇಶನಗಳು, 9.14ಮೀx12.19ಮೀ ಅಳತೆಯ 51 ನಿವೇಶನಗಳು, 9.14ಮೀxಅನಿಯತ ಅಳತೆಯ 17 ನಿವೇಶನಗಳು ಮತ್ತು ಅನಿಯತ ಅಳತೆಯ 17 ನಿವೇಶನಗಳು ಒಟ್ಟು 87 ನಿವೇಶನಗಳನ್ನು ಗುರುತಿಸಲಾಗಿದೆ.

ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ ಗ್ರಾಮ ಪಂಚಾಯಿತಿಯು ವಿನ್ಯಾಸ ಅನುಮೋದನೆ ಆದೇಶ ಹೊರಡಿಸಬೇಕಾಗಿದ್ದು ಉಲ್ಲೇಖ(3) ರ ಕೈಪಿಡಿಯಲ್ಲಿನ ಮಾರ್ಗಸೂಚನೆಗಳನ್ನು ಹಾಗೂ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗೊಳಪಟ್ಟು ವಿನ್ಯಾಸಯನ್ನು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

### ನಿಬಂಧನೆಗಳು:

1. **ವಿನ್ಯಾಸವು ಅನುಮೋದನೆ ದಿನದಿಂದ ಎರಡು ವರ್ಷಗಳ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು. (ಕೈಪಿಡಿಯ ಮಾರ್ಗಸೂಚಿಯನ್ವಯ)**
2. ಅಭಿವೃದ್ಧಿ ಶುಲ್ಕವನ್ನು ಅಂದಾಜು ಪಟ್ಟಿಯಂತೆ ಹಾಗೂ ಇತರೆ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಸರ್ಕಾರಿ ಆದೇಶಗಳನ್ವಯ ಪಡೆಯತಕ್ಕದ್ದು.
3. ಅನುಮೋದಿತ ವಿನ್ಯಾಸದಲ್ಲಿರುವಂತೆಯೇ ನಿವೇಶನಗಳು, ರಸ್ತೆಗಳು ಮತ್ತಿತರ ಸಾರ್ವಜನಿಕ ಉದ್ದೇಶದ ಪ್ರದೇಶಗಳನ್ನು ಅಭಿವೃದ್ಧಿಪಡಿಸತಕ್ಕದ್ದು.
4. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
5. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು, ಮತ್ತು ರಸ್ತೆಗಳ ಎರಡು ಕಡೆ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು.
6. ಸದರಿ ವಿನ್ಯಾಸದ ಜಮೀನುಗಳಲ್ಲಿ ಕಂದಾಯ ದಾಖಲಾತಿಯನ್ವಯ ಇರುವ 'ಬಿ' ಖರಾಬು ಪ್ರದೇಶವು ಸರ್ಕಾರಕ್ಕೆ ಸೇರಿದ್ದು, ಯಾವುದೇ ಒತ್ತುವರಿಗೆ ಅವಕಾಶವಿಲ್ಲದಂತೆ ಯಥಾ ರೀತಿ ಕಾಯ್ದಿರಿಸತಕ್ಕದ್ದು.
7. ಅನುಮೋದಿತ ವಸತಿ ವಿನ್ಯಾಸದಲ್ಲಿರುವ ರಸ್ತೆಗಳು, ಆಟದ ಮೈದಾನ ಮತ್ತು ಉದ್ಯಾನವನ ಮತ್ತಿತರ ಸಾರ್ವಜನಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು, ಅರ್ಜಿದಾರರಿಗೆ/ಅಭಿವೃದ್ಧಿದಾರರಿಗೆ ಯಾವುದೇ ಪರಿಹಾರವನ್ನು ನೀಡದೆ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪಡೆಯತಕ್ಕದ್ದು.

8. ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಗ್ರಾಮ ಪಂಚಾಯ್ತಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡತಕ್ಕದ್ದು.
9. ನಿವೇಶನ ಬಿಡುಗಡೆಯ ಮೊದಲನೇ ಹಂತವಾಗಿ ಶೇ.60 ರಷ್ಟು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅರ್ಜಿದಾರರು/ ಅಭಿವೃದ್ಧಿದಾರರು ಒದಗಿಸಿದ ನಂತರ ಉಳಿಕೆ ಶೇ.40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು (ಕೈಪಿಡಿಯ ಮಾರ್ಗಸೂಚಿಯನ್ವಯ)
10. ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಳಿ **(Water Recharge)** ಮತ್ತು ಮಳೆ ನೀರು ಸಂಗ್ರಹಣೆ **(Rain water harvesting pits)** ಗಳನ್ನು ಗುರ್ತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
11. ವಿನ್ಯಾಸ ಅಂಗೀಕಾರ ಸಂಬಂಧ ಇತರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾದ್ದಲ್ಲಿ ಅರ್ಜಿದಾರರಿಂದ ಅಂತಹ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
12. ಅನುಮೋದಿತ ವಿನ್ಯಾಸದಲ್ಲಿ ಕೊಳವೆ ಬಾವಿಯನ್ನು ಕೊರೆಯುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ಕೊರೆದ ಬಾವಿಯ ಬಗ್ಗೆ ಭೂ-ಮಾಲೀಕರುಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:31.12.2012 ಮತ್ತು ದಿನಾಂಕ:06.08.2014 ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೇ ಕ್ರಮವಹಿಸತಕ್ಕದ್ದು.
13. ಸದರಿ ಬಡಾವಣೆಯಲ್ಲಿ ಸುತ್ತಲೂ ಕಂಪೌಂಡ್ ನಿರ್ಮಿಸಿ, ಗೇಟನ್ನು ಅಳವಡಿಸಿ **"ಗೇಟೆಡ್ ಕಮ್ಯುನಿಟಿ"** ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ, ಉದ್ಯಾನವನ, ಬಯಲುಜಾಗ ಮತ್ತು ನಾಗರೀಕ ಸೌಲಭ್ಯ ನಿವೇಶನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಮುಕ್ತವಾಗಿಡತಕ್ಕದ್ದು.
14. ವಿನ್ಯಾಸ ತಾಂತ್ರಿಕ ಅನುಮೋದನೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಈ ತಾಂತ್ರಿಕ ಅನುಮೋದನೆ ತಾನಾಗಿ ರದ್ದುಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯು ವಿನ್ಯಾಸ ಅನುಮೋದಿಸಿದಲ್ಲಿ ಸೂಕ್ತ ಕ್ರಮವಹಿಸತಕ್ಕದ್ದು.
15. ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರು,
ಚಿಕ್ಕಬಳ್ಳಾಪುರ.

ಪ್ರತಿಯನ್ನು:-

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದಿಬ್ಬೂರು ಗ್ರಾಮ ಪಂಚಾಯಿತಿ ಕಾರ್ಯಾಲಯ, ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಗೆ ಅನುಮೋದಿತ ವಿನ್ಯಾಸನಕ್ಷೆಯ ಮೂರು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ ಹಾಗೂ ವಿನ್ಯಾಸಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿಯಲ್ಲಿ ಅನುಮೋದಿಸಿದ ನಂತರ ಒಂದು ಪ್ರತಿಯನ್ನು (ಆದೇಶದೊಂದಿಗೆ) ಈ ಕಛೇರಿಗೆ ಕಳುಹಿಸುವಂತೆ ಕೋರಿದೆ.
2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, (ಬೆಂ.ವಿ) ಬೆಂಗಳೂರು ಇವರಿಗೆ ನಕ್ಷೆಯ ಪ್ರತಿಯೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಸಹಾಯಕ ನಿರ್ದೇಶಕರು, ಭೂ-ಮಾಪನ ಇಲಾಖೆ, ತಾಲ್ಲೂಕು ಕಛೇರಿ ಆವರಣ, ಚಿಕ್ಕಬಳ್ಳಾಪುರ ಇವರಿಗೆ ಅನುಮೋದಿತ ವಿನ್ಯಾಸನಕ್ಷೆಯ ಪ್ರತಿಯನ್ನು ಕಳುಹಿಸುತ್ತಾ ಸರ್ವೆನಕ್ಷೆಯಂತೆ ಸ್ಥಳದಲ್ಲಿ ತಾಳೆ ಹೊಂದುತ್ತಿರುವ ಬಗ್ಗೆ ಏಳು ದಿನಗಳೊಳಗಾಗಿ ಮಾಹಿತಿ ಈ ಕಛೇರಿಗೆ ನೀಡುವುದು ಇಲ್ಲವಾದಲ್ಲಿ ಅನುಮೋದಿತ ವಿನ್ಯಾಸನಕ್ಷೆಯು ಸರ್ವೆನಕ್ಷೆಯಂತೆ ಸರಿಯಿದೆ ಎಂದು ಭಾವಿಸಲಾಗುತ್ತದೆ.
4. ಅರ್ಜಿದಾರರಾದ ಶ್ರೀ ಡಿ.ಎನ್.ನಾಗಿರೆಡ್ಡಿ ಬಿನ್ ಲೇ॥ ನಾರಾಯಣರೆಡ್ಡಿ ಮತ್ತು ಶ್ರೀ ಕೆ.ಎಂ.ಎಂ.ಅಬ್ದುಲ್ ಖಾದರ್ ಉರುಫ್ ಖಾದರ್‌ಬ್ಯಾರಿ ಬಿನ್ ಕೆ.ಮೊಹಿದ್ದೀನ್ ಬ್ಯಾರಿ, ರಾಮಗಾನಪರ್ತಿ ಗ್ರಾಮ (ಕೋಟದ ಮನೆ), ಕಸಬಾ ಹೋಬಳಿ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ನೀಡುತ್ತಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದಿಬ್ಬೂರು ಗ್ರಾಮ ಪಂಚಾಯಿತಿ ಇವರಿಂದ ನಿಯಮಗಳನ್ನು ಅನುಸರಿಸಿ ಅನುಮೋದಿತ ವಿನ್ಯಾಸನಕ್ಷೆಯನ್ನು ಪಡೆಯಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ.

ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರು,
ಚಿಕ್ಕಬಳ್ಳಾಪುರ.